ಮೇಲಿನ ಕೊಠಡಿ ಕಲಾವಿದರಿಂದ, ಒಬ್ಬಿಬ್ಬರು ಬೇರೆ ಆಹ್ವಾನಿತರಿಂದ ತುಂಬಿತ್ತು. ನಂಜನಗೂಡಿನ ಹೈಸ್ಕೂಲಿನಲ್ಲಿ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ರಾಜೀವ ಲೋಚನಂ ಎಂಬ ವೆಂಕಣ್ಣಯ್ಯನವರ ಆಪ್ತಮಿತ್ರರು ಅಲ್ಲಿ ಉಪಸ್ಥಿತರಿದ್ದರು. ಗದುಗಿನ ಭಾರತದ ರಸವತ್ತಾದ ಭಾಗಗಳಲ್ಲಿ ಒಂದೊಂದನ್ನು ಒಬ್ಬೊಬ್ಬ ಪಂಡಿತ ಓದುವ ಕಾರ್ಯಕ್ರಮ ಭರದಿಂದ ಸಾಗಿತ್ತು. ಅಂದಿನ ಕಾರ್ಯಕ್ರಮಕ್ಕೆ ಆಹ್ವಾನಿತರಾದವರಿಗೆಲ್ಲರಿಗೂ ಅಲ್ಲಿಯೇ ಭೋಜನಕ್ಕೂ ಅಹ್ವಾನವಿದ್ದುದರಿಂದ ಪಾಕಗೃಹದಲ್ಲಿ ಅಡಿಗೆಯ ಕಾರ್ಯಕ್ರಮವೂ ಭರದಿಂದ ಸಾಗಿತ್ತು. ಅದಕ್ಕಾಗಿ ಒಳ್ಳೆಯ ಅಡಿಗೆಯವನೊಬ್ಬನನ್ನು ನೇಮಿಸಲಾಗಿತ್ತು.

ಮಹಡಿಯ ಕೊಠಡಿಯಲ್ಲಿ ನಡೆಯುತ್ತಿದ್ದ ಸಂತೋಷ, ಸಂಭ್ರಮ, ಸಡಗರಗಳ ನಡುವೆ ಹೃದಯವನ್ನು ಭೇದಿಸುವಂತೆ 'ಅಯ್ಯೋ ಅಯ್ಯೋ' ಎಂಬ ಚೀತ್ಕಾರ ಕೇಳಿಬಂತು. ವೆಂಕಣ್ಣಯ್ಯನವರು ರಾಜೀವಲೋಚನಂರವರನ್ನು ತಮ್ಮ ಪ್ರತಿನಿಧಿಯಾಗಿ ಕೂರಿಸಿ ಕೆಳಗಿಳಿದು ಹೋದರು. ಎರಡು ನಿಮಿಷಗಳ ನಂತರ ಮಹಡಿಯ ಮೇಲಿನ ಮತ್ತೊಂದು ಕೊಠಡಿಯಲ್ಲಿದ್ದ ನನ್ನನ್ನೂ, ಅವರ ಅಳಿಯನಾದ ವೆಂಕಟೇಶನನ್ನೂ ಕೆಳಗಿಳಿದು ಬರುವಂತೆ ಕೂಗಿ ಕರೆದರು. ಹೋಗಿ ನೋಡಿದರೆ ಅದೊಂದು ಹೃದಯವಿದ್ರಾವಕ ದೃಶ್ಯ. ಅವರ ಎರಡನೇ ಹೆಂಡತಿಯ ಚೊಚ್ಚಲಮಗು, ಮುದ್ದಾದ ಮಗು ಕೊನೆಯುಸಿರೆಳೆದಿತ್ತು. ಅವರ ಮಡದಿ ಮಗುವಿನ ಶವವನ್ನು ತೊಡೆಯ ಮೇಲೆ ಹಾಕಿಕೊಂಡು ರೋದಿಸುತ್ತಿದ್ದರು. ವೆಂಕಣ್ಣಯ್ಯನವರ ಕಣ್ಣಲ್ಲಿಯೂ ನೀರು ತುಂಬಿತ್ತು. ಅವರು ತಕ್ಷಣವೇ ಅದನ್ನು ಒರೆಸಿಕೊಂಡರು, ಹೆಂಡತಿಗೆ ಕ್ಷಣಕಾಲ ಸಮಾಧಾನ ಹೇಳಿದರು. ಆಕೆ ಅವರಿಗೆ ತಕ್ಕ ಪತ್ನಿ, ಅವರ ಮಾತಿನಲ್ಲಿ ಅದೇನು ಮೋಡಿಯಿತ್ತೋ ಆಕೆಯ ರೋದನ ನಿಂತಿತು. ಕಣ್ಣುಗಳು ಮಾತ್ರ ಕಂಬನಿಯನ್ನು ಸುರಿಸುತ್ತಿದ್ದುವು. ವೆಂಕಣ್ಣಯ್ಯನವರು ನನ್ನ ಕಡೆ ತಿರುಗಿ, ಆ ಶವವನ್ನು ಮೌನವಾಗಿ ಕೊಂಡೊಯ್ದು, ರುದ್ರಭೂಮಿಯಲ್ಲಿ ಒಪ್ಪ ಮಾಡಿ ಬರುವಂತೆ ತಿಳಿಸಿದರು. ಹಾಗೆ ತಿಳಿಸುವಾಗ ಅವರ ಮನದಲ್ಲಿ ವಿಷಾದದ ಛಾಯೆಯೆಲ್ಲಾ ಹೋಗಿ, ಮುಖ ಪ್ರಶಾಂತವಾಗಿತ್ತು.

ಸ್ಮಶಾನದಿಂದ ನಾವು– ನಾನು ಮತ್ತು ವೆಂಕಣ್ಣಯ್ಯನವರ ಅಳಿಯ ವೆಂಕಟೇಶಯ್ಯ– ಹಿಂದಿರುಗಿದ ನಂತರ ಮನೆಯಲ್ಲಿ ಊಟದ ಸಂಭ್ರಮ ಜರುಗುತ್ತಿತ್ತು. ಎಲ್ಲರೊಡನೆ ವೆಂಕಣ್ಣಯ್ಯನವರು ಊಟಕ್ಕೆ ಕುಳಿತು, ಒಮ್ಮೊಮ್ಮೆ ತಮ್ಮ ಉಪಚಾರೋಕ್ತಿಗಳಿಂದ ಎಲ್ಲರನ್ನೂ ಸಂತೋಷಗೊಳಿಸುತ್ತಿದ್ದರು. ತೊವ್ವೆ, ಮಜ್ಜಿಗೆ ಹುಳಿ, ಚಿತ್ರಾನ್ನ, ಖೀರು, ಬೋಂಡ, ಇವುಗಳ ಮೇಲಿನ ವ್ಯಾಖ್ಯಾನ ಆಗ ತಾನೇ ಓದಿ ಮುಗಿಸಿ ಬಂದಿದ್ದ ದೂರ್ವಾಸಾತಿಥ್ಯ, ಧರ್ಮರಾಯನ ರಾಜಸೂಯ ಯಾಗದ ಮೃಷ್ಟಾನ್ನ ಭೋಜನ ಇತ್ಯಾದಿ, ಇತ್ಯಾದಿಗಳ ಮೇಲೆ ಟೀಕೆ–ಟಿಪ್ಪಣಿಗಳನ್ನು ನಡೆಸುತ್ತ ಮಂದಗತಿಯಿಂದ ಎಲ್ಲರೂ ಆಕಂಠ ಪರಿಪೂರ್ತಿಯಾಗಿ ಭೋಜನ ಮಾಡಿದರು. ಊಟವಾದ ಮೇಲೆ ತಾಂಬೂಲ ಚರ್ವಣ ಮಾಡುತ್ತ ಮತ್ತೊಮ್ಮೆ ಲೋಕಾಭಿರಾಮವಾಗಿ ಹರಟೆಹೊಡೆದು, ನಾಲ್ಕು ಗಂಟೆಯ ವೇಳೆಗೆ ಬಂದ ಮಧ್ಯಾಹ್ನದ ಕಾಫಿಯ ಪರಿಸೇವನೆಯ ನಂತರ ಎಲ್ಲರೂ ಹೊರಟುಹೋದರು, ಆಪ್ತಮಿತ್ರರಾದ ಶ್ರೀ ರಾಜೀವಲೋಚನಂ ಒಬ್ಬರ ಹೊರತು.

ಮನೆಯಲ್ಲಿ ನಡೆದ ಸಂತೋಷ–ಸಂಭ್ರಮದಲ್ಲಿ ಗೃಹಿಣಿಯ ಸುಳಿವೇ ಇಲ್ಲದಿದ್ದುದನ್ನು ಕಂಡು ರಾಜೀವಲೋಚನಂಗೆ ಕೌತುಕ, ಕುತೂಹಲ. ಅತಿಥಿ ಸೇವೆಯಲ್ಲಿ ಆಕೆ ಎತ್ತಿದ ಕೈ, ಇಂದು ಆಕೆಯ ಸುಳಿವೇ ಇಲ್ಲವಲ್ಲ! ಆತ ಪ್ರಶ್ನಿಸಿದರು. 'ನಿಮ್ಮ ಶ್ರೀಮತಿ ಊರಲಿಲ್ಲವೆ?' ಎಂದು. ವೆಂಕಣ್ಣಯ್ಯನವರು ಆ ಪ್ರಶ್ನೆಗೆ ನೇರವಾಗಿ ಉತ್ತರ ಕೊಡದೆ ಪಂಪನ ಆದಿಪುರಾಣದಲ್ಲಿ ಬರುವ ನೀಲಾಂಜನೆಯ ನೃತ್ಯದ ಕಥೆಯನ್ನು ಹೇಳಿದರು. 'ವೃಷಭನಾಥನಿಗೆ ಗೊತ್ತಾಯಿತು, ಅದು ಯಾರ ಗಮನಕ್ಕೂ ಬರಲಿಲ್ಲ, ಆದರೆ ವೃಷಭನಾಥನಿಗೆ ಗೊತ್ತಾಯಿತು. ನಾನು ಇಂದು ದೇವೇಂದ್ರನ ಪಾತ್ರವನ್ನು ವಹಿಸಿದ್ದೆ. ನನ್ನ ಮನೆಯಲ್ಲಿ ನಡೆದ ಆಚಾತುರ್ಯ ಯಾರಿಗೂ ಗೊತ್ತಾಗಲಿಲ್ಲ. ನಿನ್ನ ಕಣ್ಣಿಗೆ ಆ ಆಭಾಸ ಗೊತ್ತಾಗಿದೆ. ನೀನು ವೃಷಭನಾಥನಂತೆ ಪುಣ್ಯಜೀವಿ' ಎಂದರು.

ಈ ಮಾತುಗಳನ್ನು ಕೇಳಿ ರಾಜೀವಲೋಚನಂರವರು